ಸಿಡಿಯಾಚರಣೆ

ಮಹಾದೇವಪ್ಪ

ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು.

DOI: https://doi.org/10.5281/zenodo.18471153

ABSTRACT:

ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ನಂಬಿಕೆ ಮತ್ತು ಆಚರಣೆಗಳು ಸಮುದಾಯದ ಸ್ವಾಸ್ಥ್ಯ ಹಾಗೂ ದೈವೀ ಅನ್ವೇಷಣೆಯ ಪ್ರತಿಫಲಗಳಾಗಿವೆ. ಜನಪದರ ಬದುಕಿನಲ್ಲಿ ರೋಗ ನಿವಾರಣೆ ಮತ್ತು ಇಷ್ಟಾರ್ಥ ಸಿದ್ಧಿಗಾಗಿ ಆಚರಿಸಲ್ಪಡುವ 'ಸಿಡಿ' ಆಚರಣೆಯು ಐತಿಹಾಸಿಕವಾಗಿ ನರಬಲಿಯ ಸಾಂಕೇತಿಕ ರೂಪಾಂತರವಾಗಿದೆ. ಬಳ್ಳಾರಿಯ ಕನಕದುರ್ಗಮ್ಮನ ದೇವಸ್ಥಾನದ ಉದಾಹರಣೆಯೊಂದಿಗೆ, ಈ ಲೇಖನವು ಸಿಡಿ ಬಂಡಿಯ ಸಿದ್ಧತೆ, ಅಲಂಕಾರ ಹಾಗೂ ಬೊಂಬೆಯ ಸಿಡಿಯ ವಿಧಿವಿಧಾನಗಳನ್ನು ವಿಶ್ಲೇಷಿಸುತ್ತದೆ. ವಚನಕಾರರು ಮತ್ತು ದಾಸರ ಸಾಹಿತ್ಯದಲ್ಲಿನ ಉಲ್ಲೇಖಗಳ ಮೂಲಕ ಈ ಪದ್ಧತಿಯ ಕ್ರೂರತೆಯ ಮೇಲಿನ ಟೀಕೆ ಹಾಗೂ ವಿಜಯನಗರದ ಕಾಲದ ಐತಿಹಾಸಿಕ ಹಿನ್ನೆಲೆಯನ್ನು ಇಲ್ಲಿ ಚರ್ಚಿಸಲಾಗಿದೆ. ಒಟ್ಟಾರೆಯಾಗಿ, ಸಿಡಿಯು ಧಾರ್ಮಿಕ ಭಯ ಮತ್ತು ಅಚಲ ಭಕ್ತಿಯ ಸಮ್ಮಿಲನವಾಗಿ ಇಂದಿಗೂ ಜನಮಾನಸದಲ್ಲಿ ಉಳಿದುಬಂದಿರುವುದನ್ನು ಇದು ಸ್ಫುಟಗೊಳಿಸುತ್ತದೆ.

KEYWORDS:

ಸಿಡಿಯಾಚರಣೆ, ಜನಪದ ನಂಬಿಕೆಗಳು, ಹರಕೆ, ಸಿಡಿಬಂಡಿ, ಸಂಸ್ಕೃತಿ.

ಸಂಸ್ಕೃತಿ ಎನ್ನುವುದು ಹಲವಾರು ಮಾನವನ ಚಟುವಟಿಕೆಗಳನ್ನು ಒಳಗೊಂಡಿರುವ ಒಂದು ಗುಚ್ಛ. ಅವನ ಆಚಾರ-ವಿಚಾರ, ಸಂಪ್ರದಾಯ, ನಂಬಿಕೆ, ವಿಶ್ವಾಸ, ಸಂತೋಷದ ವಿಷಯಗಳನ್ನೊಳಗೊಂಡಂತೆ ಮಾನವನು ಹುಟ್ಟಿನಿಂದ ಹಿಡಿದು ಸಾಯುವವರಗೂ ಹೀಗೇ ಮಾಡಬೇಕೆಂದು ನಿರ್ಧರಿಸಿ ನಡೆದುಕೊಳ್ಳುವನೋ ಎಲ್ಲವೂ ಸಂಸ್ಕೃತಿಯ ಮಡಿಲಲ್ಲಿ ಆಶ್ರಯ ಪಡೆದಿವೆ. ಆದರೆ ಇಲ್ಲಿ ಸಮುದಾಯದಿಂದ ಸಮುದಾಯಕ್ಕೆ ಮಾಡುವ ಆಚಾರ ವಿಚಾರಗಳು ಭಿನ್ನತೆಯಿಂದ ಕೂಡಿರುತ್ತವೆ. ಭಾರತದಂತಹ ಹಲವಾರು ಧರ್ಮಗಳು ಮತ್ತು ಜಾತಿಗಳು ಇರುವ ದೇಶದಲ್ಲಿ ಇನ್ನೂ ಹೆಚ್ಚಿನ ಪ್ರಕಾರಗಳನ್ನು ಕಾಣುತ್ತೇವೆ. ಪ್ರಾಚೀನ ಕಾಲದಿಂದಲೂ ಮಾನವನು ತನ್ನ ಬದುಕಿನ ಉನ್ನತ ಶ್ರೇಯಸ್ಸಿಗಾಗಿ, ರೋಗ ನಿವಾರಣೆಗಾಗಿ, ದಿನನಿತ್ಯದ ಕಾರ್ಯಚಟುವಟಿಕೆಗಳು ಸುಗಮವಾಗಿ ನಡೆಯುವಂತೆ ತನಗೆ ಸಂಬಂಧವಿದ್ದ ಅಗೋಚರ ದುಷ್ಟ ಶಕ್ತಿಯ ನಿವಾರಣೆಗಾಗಿ, ಪೂಜಾ ವಿಧಿ-ವಿಧಾನಗಳು, ಉತ್ಸವ, ಜಾತ್ರೆ, ಹಬ್ಬ, ಹರಿದಿನ, ನಂಬಿಕೆ ಆಚರಣೆಗಳನ್ನು ಆಚರಿಸುತ್ತಾ ಬಂದನು. ನಂಬಿಕೆ

ಆಚರಣೆಗಳು ಮಾನವನ ಹಾಗೂ ಸಮಾಜದ ಸ್ವಾಸ್ಥ್ಯ ಕಾಪಾಡುವುದಲ್ಲದೆ ಅವು ಪ್ರತಿಯೊಂದು ಗುಂಪನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಕೊಂಡೊಯ್ಯುತ್ತವೆ. ನಂಬಿಕೆ, ಆಚರಣೆಗಳು, ಕುಲಸಂಕೇತ ಮತ್ತು ಕುಲದೇವರ ಆರಾಧನೆಗಳ ಮೇಲೆ ರೂಪಗೊಂಡಂತವುಗಳಾಗಿವೆ.

ಪ್ರತಿಯೊಬ್ಬ ಮನುಷ್ಯನು ತನ್ನ ಆಗುಹೋಗುಗಳ ಚಿಂತನೆಗೆ ಅನೇಕ ಪರಿಹಾರಗಳನ್ನು ಹುಡುಕಿ ಭವಿಷ್ಯವನ್ನು ಅನೇಕ ಮಾರ್ಗಗಳಿಂದ ನೋಡಲು ಇಚ್ಛಿಸುತ್ತಾನೆ. ಮನುಷ್ಯನ ಭಯದ ಮನಸ್ಸಿನಿಂದ ದೇವರು-ಧರ್ಮಗಳು ರೂಪುಗೊಂಡು ನಂಬಿಕೆ, ಹರಕೆ, ಆಚರಣೆ ಹಾಗೂ ಸಂಪ್ರದಾಯಗಳು ಬಳಕೆಯಲ್ಲಿ ಬಂದವು. ಜನಪದರ ವರ್ಣಮಯ ಸಂಸ್ಕೃತಿಯಲ್ಲಿ ಅಳವಡಿಸಿಕೊಂಡು ಬಂದಿರುವ ದಿಕ್ಕುಗೆಡಿಸುವ ನಂಬಿಕೆಗಳಿಂದ ಮುಂದುವರಿದಿರುವ ಆಚರಣೆಗಳು, ಆಚರಣೆಗಳಿಂದ ಮುಂದುವರಿದ ಸಂಪ್ರದಾಯಗಳು ಒಂದಕ್ಕಿಂತ ಇನ್ನೊಂದು ಆಶ್ಚರ್ಯ ಪಡುವಂಥವುಗಳಾಗಿವೆ. ನಂಬಿಕೆ ಆಚರಣೆಗಳು ಮನುಷ್ಯನ ದಿನನಿತ್ಯದ ಬದುಕಿನ ಎರಡು ಮುಖಗಳು. ನಂಬಿಕೆ ಮಾತಿನ ಮೂಲಕ ವ್ಯಕ್ತಿಗೆ ಸ್ಫೂರ್ತಿ ನೀಡಿದರೆ ಆಚರಣೆಗಳು ಕ್ರಿಯೆಯ ಮೂಲಕ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತವೆ.

ಧಾರ್ಮಿಕ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಹಬ್ಬ ಹರಿದಿನ, ರಥ, ಜಾತ್ರೆ, ಆಯಾ ದೇವತೆಗಳ ಎದುರಿನಲ್ಲಿ ಹರಕೆ ಹೊತ್ತುಕೊಂಡು ವಿವಿಧ ಆಚರಣೆಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ. ನರಬಲಿಯೂ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಸಂಪತ್ತಿನ ಸಮೃದ್ಧಿಗಾಗಿ ಆರಂಭವಾದ ಆಚರಣೆಯಾಗಿತ್ತು. ಕಾಲಕ್ರಮೇಣ ಇದು ಮಾಯವಾಗಿ ಅದರ ಸ್ಥಾನದಲ್ಲಿ ಸಾಮೂಹಿಕ ಹಾಗೂ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವುದರ ಸಲುವಾಗಿ ಹರಕೆ ಹೊತ್ತು ಸಿಡಿ ಆಡುವುದನ್ನು ಅನುಸರಿಸಿಕೊಂಡು ಬಂದರು. ಈ ರೀತಿಯಾಗಿ ಒಂದು ಜನಸಮೂಹದಲ್ಲಿ ಸಿಡಿ ಆಚರಣೆಯು ಮುಂದೆ ಸಂಪ್ರದಾಯವಾಗಿ ಪರಿಣಮಿಸಿತು. ಇದಕ್ಕೆ ಕಾರಣ ಅವರ ನಂಬಿಕೆ, ಹರಕೆ, ಆಚರಣೆ, ಆಚರಿಸುವ ವಿಧಾನ, ಅದರ ಮೂಲ ಸ್ವರೂಪ ಜನತೆಯ ಮಾನಸಿಕ ಹಿನ್ನೆಲೆಯೇ ಕಾರಣವಾಗಿರುತ್ತದೆ ಎಂದು ಹೇಳಬಹುದು.

ಗ್ರಾಮದೇವತೆಗಳ ಜಾತ್ರೆಯಲ್ಲಿ ಸಿಡಿ ಸಂಪ್ರದಾಯ ಒಂದು ಆಚರಣೆ. ಮಾನವನ ರಕ್ತ ಭೂದೇವಿಗೆ ಸಮರ್ಪಣೆಯಾಗದೆ ಬೆಳೆ ಹುಲುಸಾಗುವುದಿಲ್ಲ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಸಿಡಿಯಾಡುವ ಸಂಪ್ರದಾಯ ಬೆಳೆದು ಬಂದಿರಬೇಕು. ಸಿಡಿಯಾಡುವ ಪದ್ಧತಿ ಪ್ರಾದೇಶಿಕ ಭಿನ್ನತೆಗಳಿಂದ ಕೂಡಿದ್ದು ಆಯಾ ಗ್ರಾಮದೇವತೆಯ ಸಂತುಷ್ಟಿಗಾಗಿ ನಿಗದಿತ ಅವಧಿಯಲ್ಲಿ ನೇಮಾನುಸಾರವಾಗಿ ಆಚರಿಸುತ್ತಾರೆ. ಉದಾಹರಣೆಗಾಗಿ ಹೇಳುವುದಾದರೆ ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ಕಡೆ ಸಿಡಿಯಾಡುವುದು ಈಗಲೂ ಜಾರಿಯಲ್ಲಿದೆ. ಬಳ್ಳಾರಿ ನಗರದ ಆರಾಧ್ಯ ದೈವ ಕನಕದುರ್ಗಮ್ಮ ದೇವಿಯ ಸಿಡಿಬಂಡಿ ರಥೋತ್ಸವಕ್ಕೆ ಜಿಲ್ಲೆಯವರಷ್ಟೇ ಅಲ್ಲದೆ

ಆಂಧ್ರಪ್ರದೇಶದ ಸಾವಿರಾರು ಭಕ್ತರು ಕಾತುರದಿಂದ ಎದುರು ನೋಡುತ್ತಾರೆ. ಉತ್ಸವಕ್ಕೆ ವಿಶೇಷವಾಗಿ ಅಲಂಕರಿಸಿದ ಮೂರು ಜೊತೆ ಎತ್ತುಗಳನ್ನು ದೇವಸ್ಥಾನಕ್ಕೆ ಮೂರು ಸಲ ಪ್ರದಕ್ಷಿಣೆ ಹಾಕಿಸಿ ನಂತರ ಸಿಡಿಬಂಡಿಗೆ ಕಟ್ಟಿ, ಸಿಡಿಬಂಡಿ ತೇರಿನ ಮೆರವಣಿಗೆ ಮಾಡುತ್ತಾರೆ. ಇದಕ್ಕೆ ಎರಡು ನೂರು ವರ್ಷಗಳ ಇತಿಹಾಸವಿದೆ ಎಂದು ಹೇಳುತ್ತಾರೆ.

ಬಂಡಿಯ ಬೊಂಬೆಯ ಸಿಡಿ

ಈ ಸಿಡಿಯು ಶಿವರಾತ್ರಿಯಾದ 9 ನೇ ದಿವಸದಲ್ಲಿ ಜರಗುವುದು. ಗಾಣಿಗ ಜನಾಂಗ ಸಿಡಿಬಂಡಿಯ ವ್ಯವಸ್ಥೆಯನ್ನು ಅಂದರೆ ಬಂಡಿಯನ್ನು ತಯಾರಿಸುವುದು, ಸಿಡಿಯಾಚರಣೆ ವಿಧಿಪೂರ್ವಕವಾಗಿ ಜರುಗಿಸುವುದು ಇವರ ಹೊಣೆಯಾಗಿದೆ. ಈ ಸಿಡಿಯಲ್ಲಿ ವ್ಯಕ್ತಿಯ ಸ್ಥಾನದಲ್ಲಿ ನಿರ್ಜೀವವಾದ ಪುರುಷಬೊಂಬೆ ಕಟ್ಟುವರು. ಬೊಂಬೆ ಕಟ್ಟುವ ಸಿಡಿಬಂಡಿಯು ವ್ಯಕ್ತಿಯ ಕೊಕ್ಕೆಯ ಸಿಡಿಬಂಡಿಯಂತೆಯೇ ಇದರ ಆಕಾರವಿರುವುದು. ಬಂಡಿಯನ್ನು ಸಿದ್ಧಪಡಿಸಿದ ತರುವಾಯ ಶುಕ್ರವಾರದ ಮಧ್ಯಾಹ್ನ ಮೂರು ಗಂಟೆಯ ಸಮಯಕ್ಕೆ ಬಂಡಿಯ ಆಹಾರದ ಕುಂಭವು ವಾಲ್ಮೀಕಿ, ಗೌಡ, ನೇಕಾರರ ಮನೆಯಲ್ಲಿ ಜೋಳದ ಕಾಳಿನಿಂದ ಮಡಿಯಿಂದ ಹೊಸದಾದ ಮಡಿಕೆಯಲ್ಲಿ ಕುದಿಸಿ ತಯಾರಿಸಿರುವ ಕುಂಭದ ನೈವೇದ್ಯವು ಅರ್ಪಿತವಾಗುವುದು. ನಂತರ ಬಂಡಿಯನ್ನು ಎಳೆಯಲು ಮೂರು ಜೊತೆಯ ಎತ್ತುಗಳನ್ನು ಬಂಡಿಗೆ ಕಟ್ಟಿಕೊಂಡು ಎಳೆಸುತ್ತಾ ಕೌಲ್ ಬಜಾರಿನಿಂದ ಹೊರಟ ಬಂಡಿಯು ಗಾಂಧಿನಗರದಲ್ಲಿರುವ ದುರ್ಗಮ್ಮನ ಎದುರಿನಲ್ಲಿ ಬಂದು ಸಿಡಿಗಾಗಿ ನಿಲ್ಲುವುದು. ಭಕ್ತರು ಈ ಸಂದರ್ಭದಲ್ಲಿ ಹೂವು, ಹಣ್ಣು, ಕಾಯಿ, ಕರ್ಪೂರ ಮತ್ತು ನೈವೇದ್ಯ ಮಾಡಿಸಿ ಸಂಜೆ ಐದು ಗಂಟೆಯ ಸುಮಾರಿಗೆ ನಿರ್ಜೀವವಾದ ಪುರುಷ ಬೊಂಬೆಯನ್ನು ಸಿಡಿಗಳುವಿನ ತುದಿಯಲ್ಲಿ ಕಟ್ಟುವರು. ಗಳುವಿನ ಹಿಂದಿನ ತುದಿಯನ್ನು ಕೆಳಕ್ಕೆ ಒತ್ತಲು ಮುಂದಿನ ತುದಿಯು ಸಿಡಿಯಾಡುವ ಬೊಂಬೆಯೊಂದಿಗೆ ಮೇಲೆದ್ದು ಸಿಡಿಗಳವಿನೊಂದಿಗೆ ನೇತಾಡುವುದು. ಸಿಡಿಗಳುವಿನ ಹಿಂದಿನ ತುದಿಯನ್ನು ಹಗ್ಗದಿಂದ ಬಂಡಿಯ ಅಚ್ಚಿಗೆ ಕಟ್ಟಿ, ಬಂಡಿಗೆ ಮೂರು ಜೊತೆಯ ಎತ್ತುಗಳನ್ನು ಹೂಡಿ ಬಂಡಿ ಎಳೆಸಲು ಪ್ರಾರಂಭಿಸುವರು. ಹೀಗೆ ಹಲವು ವಿಧಿ ವಿಧಾನಗಳ ಮೂಲಕ ಸಿಡಿ ಸಂಪ್ರದಾಯವನ್ನು ಆಚರಿಸುವರು.

ಬಂಡಿಯ ಹರಕೆ

ಹರಕೆ ಜನಪದ ಆಚರಣೆಗಳಲ್ಲಿ ತುಂಬಾ ಪ್ರಸಿದ್ಧವಾದ ಆಚರಣೆ. ಒಳ್ಳೆಯದು ಆಗಲಿ, ಕೆಟ್ಟದ್ದು ಆಗದಿರಲಿ ಎಂದು ಬೇಡಿಕೊಳ್ಳುವುದೇ ಹರಕೆ. ಪ್ರಕೃತಿಯ ಅನಂತ ಶಕ್ತಿಯನ್ನು ಒಲಿಸಿಕೊಳ್ಳಲು ಅಥವಾ ಪ್ರಸನ್ನಗೊಳಿಸಿಕೊಳ್ಳಲು ಜನಪದರು ನಡೆಸುತ್ತಾ ಬಂದ ಹಲವು ಬಗೆಯ ಆಚರಣೆಗಳಲ್ಲಿ ಇದೂ ಒಂದು. ಹರಕೆ ದಿನನಿತ್ಯದ ಪ್ರಾರ್ಥನೆಯಿಂದ ಭಿನ್ನವಾಗಿದ್ದು, ವಿಶಿಷ್ಟವಾಗಿ ವ್ಯಕ್ತಿಗತವಾಗಿರುತ್ತದೆ. ಹರಕೆಯಲ್ಲಿ ವ್ಯಕ್ತಿಗತವಾದ ಅಂಶ ಭಾಗಶಃ ಇದ್ದರೂ ಸಾರ್ವತ್ರಿಕ ಅಥವಾ ಸಾಮೂಹಿಕ ಇಲ್ಲವೇ ಕೌಟುಂಬಿಕ ಹಿತ ಪ್ರಧಾನವಾಗಿರುತ್ತದೆ ಎಂದು ಹೇಳಬಹುದು. ಪ್ರತಿಯೊಂದು

ಮನೆಗೆ ಒಂದು ಹೆಣ್ಣು ಒಂದು ಗಂಡು ಹೀಗೆ ಎರಡು ಮನೆ ದೇವರುಗಳಿರುತ್ತವೆ. ಮನೆಯಲ್ಲಿ ಯಾರಿಗಾದರೂ ಕೇಡಾದರೆ ಅಥವಾ ಕಾಯಿಲೆಯಾದರೆ ಹರಕೆ ಹೊತ್ತದ್ದರಿಂದ ನಿವಾರಣೆಯಾಯಿತೆಂದು ದೇವರಿಗೆ ಬಲಿ ಕೊಡುವ, ಅಭಿಷೇಕ ಮಾಡಿಸುವ ಮುಂತಾದ ಹರಕೆಗಳನ್ನು ಮನೆಯ ಯಜಮಾನ ಅಥವಾ ಯಜಮಾನಿ ರೋಗಿಯ ಪರವಾಗಿ ಹರಕೆ ತೀರಿಸುತ್ತಾರೆ. ಹೀಗೆ ಹರಕೆ ಕಟ್ಟಿಕೊಂಡ ವ್ಯಕ್ತಿಯ ಕಷ್ಟಗಳು ಬಯಲಾದಾಗ ತಾನು ಹರಕೆ ಹೊತ್ತು ದೇವರ ವಾರ, ಹಬ್ಬ, ಜಾತ್ರೆಯ ದಿನ ಹರಕೆ ತೀರಿಸುತ್ತಾರೆ.

ಸಿಡಿ ಬಂಡಿಯ ನಂಬಿಕೆಗಳು

ಸಿಡಿ ಆಚರಣೆಯು ಸಾಮಾನ್ಯವಾಗಿ ಒಂದೇ ಮಾದರಿಯನ್ನೊಳಗೊಂಡಿದೆ. ತಾವು ನಂಬಿದ ದೈವದ ಮೇಲೆ ನಂಬಿಕೆಯಿಟ್ಟಂತಹ ವ್ಯಕ್ತಿಗಳು ತಮಗೆ ಜೀವನದಲ್ಲಿ ಕಷ್ಟಗಳು ಬಂದೊದಗಿದಾಗ ಅಥವಾ ತಮ್ಮಿಂದ ಸಾಧಿಸಲು ಆಗದ ಕೆಲಸವು ಆ ಕಾಣದ ದೇವರಿಂದ ಪಡೆದುಕೊಳ್ಳಬೇಕೆಂಬ ಹಂಬಲ ಉಂಟಾಗಿ ಭಕ್ತಿಯ ಆವೇಶಕ್ಕಾಗಿ ಶರಣು ಹೋಗುವರು. ತಾವು ಇಟ್ಟಂತಹ ನಂಬಿಕೆಯಲ್ಲಿ ಆ ದೇವರು ಕಷ್ಟ ಪರಿಹರಿಸುತ್ತಾನೆಂದು ತಿಳಿದು ಬಂದಾಗ ಆಚರಣೆಗೆ ಸಿದ್ಧರಾಗುವರು. ಹರಕೆ ಕಟ್ಟಿಕೊಳ್ಳುವಾಗಲೂ ಸಹಿತ ಅವರ ಮನಸ್ಸಿನಲ್ಲಿ ನಂಬಿಕೆಯೇ ಪ್ರಬಲವಾಗಿರುತ್ತದೆ. ದೇವರು ನಮ್ಮನ್ನು ಯಾವತ್ತೂ ಕೈಬಿಡುವುದಿಲ್ಲ, ತಮ್ಮ ಕಷ್ಟಗಳು ಪರಿಹಾರವಾಗುವವು ಎಂದು ನಂಬುವರು. ವಚನಬದ್ಧರಾಗಿ ಸಿಡಿಯಾಡಲು ಸಿದ್ಧರಾಗುತ್ತಾರೆ. ಮೂಢನಂಬಿಕೆ ಎನ್ನುವುದು ಮೌಢ್ಯತೆಯನ್ನೊಳಗೊಂಡು ಅಚಲವಾಗಿರುತ್ತದೆ. ಈ ಕಾರಣವಾಗಿ ಅವರು ಎಂತಹ ಪ್ರಾಣ ತ್ಯಾಗಕ್ಕೂ ಸಿದ್ಧರಾಗಲು ಮನಸ್ಸು ಗಟ್ಟಿ ಮಾಡಿಕೊಂಡಿರುತ್ತಾರೆ. ಈ ಕಾರಣವಾಗಿ ಅವರಿಗೆ ದೈಹಿಕ ಹಿಂಸೆ ಎನಿಸಿದರೂ ಸಹಿತ ಭಕ್ತಿಯ ತಲ್ಲೀನತೆಯಲ್ಲಿ ಹಿಂಸೆಯೆನಿಸಿರುವುದಿಲ್ಲ. ಬದಲಾಗಿ ಇದೊಂದು ದೇವಿಯ ಪವಿತ್ರವಾದ ಕೆಲಸ ನಿಭಾಯಿಸಿದ್ದೇನೆಂಬ ಹೆಮ್ಮೆಯ ಪರಾಕಾಷ್ಠತೆಯು ಅವರಲ್ಲಿ ಕಂಡುಬರುತ್ತದೆ.

ಸಿಡಿಯಾಚರಣೆಯ ಉದ್ದೇಶ

ಜನರ ಜೀವನದಲ್ಲಿ ಕಂಡುಬರುವ ಉದ್ದೇಶ ತಮಗೆ ಸಾಧಿಸಲಾಗದ ಕೆಲಸದ ಆಸೆಯನ್ನು ಪೂರೈಸಿಕೊಳ್ಳುವುದರ ಸಲುವಾಗಿ ದೈವೀಶಕ್ತಿಯ ಮೇಲೆ ನಂಬಿಕೆಯಿಟ್ಟುಕೊಂಡು ಶರಣು ಹೋಗುವರು. ವ್ಯಾಪಾರದಲ್ಲಿ ಲಾಭವಾಗಬೇಕು, ಸಂತಾನವಾಗಬೇಕು, ಅದರಲ್ಲೂ ಗಂಡು ಸಂತಾನ ಪಡೆಯಬೇಕು, ಕಷ್ಟಗಳೆಲ್ಲವೂ ಪರಿಹಾರವಾಗಬೇಕು ಹೀಗೆ ಇನ್ನೂ ಹಲವು ರೀತಿಯ ಹಂಬಲವಿರುವ ಬಯಕೆಗಳ ಈಡೇರಿಕೆಯ ಉದ್ದೇಶವು ಈ ಸಿಡಿಯಾಡುವವರಲ್ಲಿದೆ. ಇವು ಮೂಢನಂಬಿಕೆಯುಳ್ಳವರಿಗಷ್ಟೇ ಸೀಮಿತವಾಗಿಲ್ಲ. ಅನಕ್ಷರಸ್ಥರಷ್ಟೇ ಇಂಥ ಉದ್ದೇಶಗಳನ್ನಿಟ್ಟುಕೊಂಡಿಲ್ಲ. ಮನುಷ್ಯ ಎಷ್ಟೇ ಬುದ್ಧಿವಂತನಾದರೂ ಸಹಿತ ಅವನು ಜೀವನದಲ್ಲಿ ಏನಾದರೂ ಪಡೆಯುವ ಸಲುವಾಗಿ ದೈವೀ ಶಕ್ತಿಗೆ ಕೈವೊಡ್ಡಿ ಪಡೆಯಲು ಪ್ರಯತ್ನಿಸುವ ಉದ್ದೇಶ ಹೊಂದಿರುತ್ತಾನೆ. ಅವರು ಆ ದೈವದ ಮೇಲೆ

ಇಟ್ಟುಕೊಂಡಿರುವ ಆಸೆಯು ಕೈಗೂಡಿದಾಗ ಹರಕೆ ಮುಟ್ಟಿಸಲು ಇಂತಹ ಸಿಡಿಯ ಕ್ರಿಯಾಚರಣೆಯಲ್ಲಿ ಮಾನಸಿಕವಾಗಿ, ದೈಹಿಕವಾಗಿ ಎಂತಹ ಹಿಂಸೆಯನ್ನಾದರೂ ಸಹಿಸಿಕೊಳ್ಳುವ ಮನೋಸ್ಥೈರ್ಯ ಹೊಂದಿದವರಾಗಿರುತ್ತಾರೆ. ಸಿಡಿಯು ಸಮಾಜದಲ್ಲಿ ಮೂಢನಂಬಿಕೆಯಾಗಿ ಕಂಡುಬಂದರೂ ಸಹಿತ ಮನೆಯಲ್ಲಿ ಯಾರಿಗಾದರೂ ಕಾಯಿಲೆ ಕಾಣಿಸಿಕೊಂಡರೆ ದೇವರಿಗೆ ಹೋಗಿ ನಂಬಿಕೆಯಿಂದ ಹರಕೆ ಕಟ್ಟಿಕೊಂಡರೆ ತೊಂದರೆಗಳು ನಿವಾರಣೆಯಾಗುತ್ತವೆಂದೇ ಸಿಡಿ ಆಡುತ್ತಾರೆ.

ಸಿಡಿಬಂಡಿಯ ಸಿದ್ಧತೆ

ಸಿಡಿ ಆಚರಣೆಯ ಒಂದು ವಾರ ಮುಂಚಿತವಾಗಿ ನವ ಬಂಡಿಯ ಸಾಮಗ್ರಿಗಳನ್ನು ದೇವಸ್ಥಾನದಿಂದ ಹೊರಗೆ ತೆಗೆದು ಸ್ವಚ್ಛಗೊಳಿಸಿ ಬಿಡಿಯಾಗಿದ್ದ ನೊಗ, ಈಸು ಮತ್ತು ಗಾಲಿ ಇತ್ಯಾದಿಗಳನ್ನು ಜೋಡಿಸಿ ಸಿಡಿಬಂಡಿಯನ್ನು ಸಿದ್ಧಗೊಳಿಸುತ್ತಾರೆ. ಇದಕ್ಕೆ ನವ ಬಂಡಿ ಎಂದು ಕರೆಯುತ್ತಾರೆ. ನಂತರ ನವ ಬಂಡಿಯ ಮೆರವಣಿಗೆಯು ಊರಿನ ಪ್ರಮುಖ ಬೀದಿಗಳಲ್ಲಿ ಸಾಗುವಾಗ ಬಂಡಿಯ ಹಿಂದೆ ಮುತ್ತೈದೆಯರು ಆರತಿಯನ್ನು ಹಿಡಿದುಕೊಂಡು ಕುಂಭ ಹೊತ್ತುಕೊಂಡು ಸಾಗುತ್ತಾರೆ.

ಸಿಡಿಬಂಡಿಯ ಅಲಂಕಾರ

ಸಿಡಿ ಬಂಡಿಯನ್ನು ವಿಶಿಷ್ಟವಾಗಿ ಅಲಂಕಾರ ಮಾಡುತ್ತಾರೆ. ಸುಮಾರು 40 ಅಡಿ ಉದ್ದವಿರುವ ಈಸಿಗೆ ಹಸಿರು ಸೀರೆಯನ್ನು ಸುತ್ತುತ್ತಾರೆ. ಬಂಡಿಯ ಎಡಬಲ ಬದಿಗೆ ಬಾಳೆದಿಂಡು, ಕಬ್ಬು, ತೆಂಗಿನ ಗರಿಗಳನ್ನು ಮತ್ತು ಕಾವಿ ಬಣ್ಣದ ಧ್ವಜವನ್ನು ಕಟ್ಟಿ ಶೃಂಗರಿಸುತ್ತಾರೆ. ಮೇಲಿನ ನೊಗಕ್ಕೆ ಹಸಿರು ಸೀರೆಯನ್ನು ಸುತ್ತಿ 11 ತೆಂಗಿನ ಕಾಯಿ, 11 ಸೀರೆಗಳು, 11 ನಿಂಬೆಹಣ್ಣಿನ ಸರ ಮತ್ತು ಮಾವಿನ ತೋರಣಗಳಿಂದ ಅಲಂಕರಿಸುತ್ತಾರೆ. ಸಿಡಿ ಸಂಪ್ರದಾಯ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿತ್ತು ಎಂಬುದಕ್ಕೆ ಆಯಾ ಕಾಲದಲ್ಲಿ ಲಭ್ಯವಿರುವ ಸಾಹಿತ್ಯಿಕ ಕೃತಿಗಳಿಂದ ಹಾಗೂ ಜನಪದ ಕಾವ್ಯಗಳಿಂದ ತಿಳಿದು ಬರುತ್ತದೆ.

ಸಿಡಿ ಆಚರಣೆಯು 12 ನೇ ಶತಮಾನದಲ್ಲಿ ಆಚರಣೆಯಿಲ್ಲಿತ್ತೆಂದರೆ ವಚನಕಾರರು ವಚನಗಳಲ್ಲಿ ಬೆತ್ತಲೆ ಸೇವೆ, ಪ್ರಾಣಿಬಲಿಯಂತಹ ಕ್ರೂರ ಆಚರಣೆಗಳನ್ನು ದೂಷಿಸುವ ಹಾಗೆಯೇ ಸಿಡಿಯಾಡುವ ಕ್ರೂರ ಪದ್ಧತಿಯನ್ನು ತೆಗಳಿರುವರು. ಮಾರಿಗೆ ಮಾರಿ ಭಕ್ತರು ಸಿಡಿಯಾಟದ ಸೇವೆಯನ್ನು ಸಲ್ಲಿಸುತ್ತಿದ್ದುದನ್ನು ಶಿವಶರಣ ಕಥಾರತ್ನಕೋಶವು ವಿವರಿಸುತ್ತದೆ. ಕೊರಳಿಗೆ ಕವಡೆಯ ಕಟ್ಟಿ ಬಾಯಿ ಬಿಗಿಯಾಗಿ ಹಿಡಿದುಕೊಂಡು ಹುರಿಬೆನ್ನು ಸಿಡಿಯಾಡುತ್ತಿದ್ದ ಪದ್ಧತಿಯನ್ನು ಸಿದ್ಧರಾಮನು ತಿಳಿಸುವುದಲ್ಲದೆ ಹುರಿಬೆನ್ನ ಸಿಡಿಯಾಡುವವರನ್ನು ದುರಾಚಾರಿಗಳೆಂದು ಜರೆದಿದ್ದಾನೆ. ದಾಸರೂ ಕೂಡ..

“ಒಡತಿಯೆಲ್ಲಮ್ಮನೆಂದು ಇಲ್ಲದ್ದರಕೆ ಹೊತ್ತು

ಸಿಡಿಯಾ ಊರಿಸಿಕೊಂಡು ಜೋಲಾಡುವ
ಕಡುಕೋಪದಿಂದೆ ಮಾನವರು ಶಿಕ್ಷಿಸಲು
ನಿನ್ನೊಡನೆ ಬಂದಾಗ ರಕ್ಷಿಸುವಳೆ ಮೂಳೆ"

ಎಂದು ಪುರಂದರ ದಾಸರು ಅಪಹಾಸ್ಯ ಮಾಡುತ್ತಾರೆ. ಇಟಲಿಯ ಪ್ರವಾಸಿಯಾದ ನಿಕೋಲೋ ಕಾಂಟಿ ವಿಜಯನಗರಕ್ಕೆ ಭೇಟಿ ನೀಡಿ ತನ್ನ ದಿನಚರಿಯಲ್ಲಿ ನಗರದಲ್ಲಿ ನಡೆಯುತ್ತಿದ್ದ ರಥೋತ್ಸವದ ವರ್ಣನೆಯನ್ನು ಮಾಡಿದ್ದಾನೆ. ಈತನು ಹೇಳಿದ ಪ್ರಕಾರ ವರ್ಷಕ್ಕೊಮ್ಮೆ ದೇವರ ವಿಗ್ರಹವನ್ನು ಎರಡು ತೇರುಗಳ ಮಧ್ಯೆ ಇಟ್ಟು ಮೆರವಣಿಗೆ ಮಾಡುತ್ತಾರೆ. ಈ ತೇರುಗಳಲ್ಲಿ ಸರ್ವಾಲಂಕೃತವಾದ ಗಾಯಕಿಯರು ದೇವರ ಭಜನೆ ಮಾಡುತ್ತಿರುತ್ತಾರೆ. ಜನಗಳ ಗುಂಪು ವಿಗ್ರಹವನ್ನು ಹಿಂಬಾಲಿಸಿ ಹೋಗುತ್ತಿರುತ್ತದೆ. ವಿಶೇಷ ಭಕ್ತಿಯಿರುವವರು ತೇರಿನ ಗಾಲಿಗೆ ಮೈವೊಡ್ಡಿ ಪ್ರಾಣ ತ್ಯಾಗ ಮಾಡುತ್ತಾರೆ. ಮತ್ತೆ ಕೆಲವರು ತಮ್ಮ ಪಕ್ಕೆಯಲ್ಲಿ ತೂತು ಮಾಡಿ ಅದರಲ್ಲಿ ಹಗ್ಗವನ್ನು ಪೋಣಿಸಿ ತೇರಿಗೆ ಅಲಂಕಾರಿಕವಾಗಿ ತೂಗು ಹಾಕಿಕೊಳ್ಳುತ್ತಾರೆ ಎಂದಿರುವನು.

ಸಿಡಿಯಾಡುವ ಪದ್ಧತಿಯು ವಿಜಯನಗರದರಸರ ಕಾಲದ ರಥೋತ್ಸವ ನಡೆದ ಸಂದರ್ಭದಲ್ಲಿ ನಡೆಯುತ್ತಿತ್ತು ಎಂಬುದನ್ನು ಕಾಂಟಿ ಹೇಳಿದರೆ, ಡಾ. ಎಚ್. ಎಲ್. ನಾಗೇಗೌಡರು ಆಯಾ ಜನಾಂಗದಲ್ಲಿ ಆಚರಣೆಯಲ್ಲಿ ಸಿಡಿಯನ್ನು ಹೀಗೆ ವಿವರಿಸಿದ್ದಾರೆ. 'ಇಲ್ಲಿಯ ಜನ ತಮ್ಮ ತಮ್ಮ ಜಾತಿಯ ಜನರನ್ನೇ ಮದುವೆಯಾಗುತ್ತಾರೆ. ಹಸುಗಳನ್ನು ಸರ್ಪಗಳನ್ನು ದೇವರೆಂದು ಪೂಜಿಸುತ್ತಾರೆ. ಬ್ರಾಹ್ಮಣಿ ಎಂಬ ಜನ ಹಸುವಿನ ಸಗಣಿಯನ್ನು ಸುಟ್ಟು ಬೂದಿ ಮಾಡಿ ಹಣೆಗೂ ಮೂಗಿಗೂ ಹಚ್ಚಿಕೊಳ್ಳುತ್ತಾರೆ. ಇವರು ಅನೇಕ ಹಬ್ಬಗಳನ್ನು ಆಚರಿಸುತ್ತಾರೆ' ಎಂದು ವಿವರಿಸಿದ್ದಾರೆ. ಸಿಡಿಗೆ ಸಂಬಂಧಿಸಿದ ಒಂದು ತ್ರಿಪದಿಯು ಹೀಗಿದೆ:

"ರ್‌ರನ ಕರಿಹುಡುಗಿ ಕರದರ ಬರುವಲ್ಲಿ
ಹೊಳ್ಳೀರ ನೋಡ ಸಿರಿಗೇಡಿ ನಿಮ್ಮವ್ವ
ಸಿಡಿಯಾಡಿ ನಿನ್ನ ಹಡದಾಳ"

ತ್ರಿಪದಿಯಲ್ಲಿ ಹಾಡಿ ಹರಸಿದಂತೆ ಇಂದಿನ ಜಾಯಮಾನದಲ್ಲಿ ಹರಕೆ ಹೊತ್ತ ಭಕ್ತರಲ್ಲಿ ಬಹುಪಾಲು ಭಕ್ತರ ಮಕ್ಕಳ ಹರಕೆ ಬೇಡುವುದು, ಇದು ಈಡೇರಿದ ನಂತರ ಆ ಮಗುವನ್ನು ಉಡಿಯಲ್ಲಿ ಕಟ್ಟಿಕೊಂಡು ಸಿಡಿಯಾಡುವ ದೃಶ್ಯ, ನೋಡುವ ಭಕ್ತರಿಗೂ ಮತ್ತು ಜನಸಮೂಹಕ್ಕೂ ಬೆರಗುಗೊಳಿಸುವಲ್ಲಿ ಯಾವ ಸಂದೇಹವಿಲ್ಲ ಎಂದು ಹೇಳಬಹುದು.

ಪರಾಮರ್ಶನ ಗ್ರಂಥಗಳು:

1. ದಾಸೇಗೌಡ ಜಿ.ವಿ., (1973), ನಮ್ಮ ಜನಪದ ನಂಬಿಕೆಗಳು, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
2. ಜವರೇಗೌಡ ದೇ., (1976), ಜಾನಪದ ಅಧ್ಯಯನ, ಮೈಸೂರು: ಚೇತನ ಬುಕ್ ಹೌಸ್.
3. ನಾಯಕ ಹಾ.ಮಾ. (ಪ್ರ.ಸಂ.), (1979), ಕರ್ನಾಟಕ ವಿಶ್ವಕೋಶ, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.
4. ಹಿರೇಮಠ ಎಸ್.ಎಸ್., (1995), ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಜಾತ್ರೆಗಳು, ಹೊಸಪೇಟೆ: ಸಮತಾ ಪ್ರಕಾಶನ.
5. ಚಪ್ಪರಬಂದ ರಾಜಾಸಾಬ, (1998), ಬಿಜಾಪುರ ಜಿಲ್ಲೆಯ ಜಾತ್ರೆಗಳು (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
6. ರಮೇಶ ಸ.ಚಿ., (2010), ಕರ್ನಾಟಕದ ಜನಪದ ಆಚರಣೆಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.